# ವಧು ಕಾಜೋಲ್, ವರ ಶಾರೂಖ್!

## ಪುಷ್ಕರ ಜಾತ್ರೆಯಲ್ಲಿ ಕಂಡ ವಿಶಿಷ್ಟ ವಧು ನೋಡುವ ಶಾಸ್ತ್ರ

**ಪ್ರಾಣಿಗಳನ್ನು ಬಳಸಿಕೊಂಡು ಮನರಂಜನಾ ಕಾರ್ಯಕ್ರಮಗಳ ಪ್ರದರ್ಶನ ನೀಡುವ ಕಲೆ ಈಗಲೂ ಅಲ್ಲಲ್ಲಿ ಚಾಲ್ತಿಯಲ್ಲಿದೆ. ಅಂಥ ಪ್ರದರ್ಶನಗಳಲ್ಲಿ ಸಿನಿಮಾರಂಗದ ಖ್ಯಾತನಾಮರೂ ಪಾತ್ರಗಳಾಗಿ ಬಂದುಹೋಗುತ್ತಾರೆ.**

**■ ಪ್ರಕಾಶ ಕಂದಕೂರ**



ಜಾತ್ರೆಯ ಮೈದಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರು. ಒಳಗೇನು ನಡೆಯುತ್ತಿದೆ ಎಂಬುದು ಕಾಣದಷ್ಟು ಆ ಗುಂಪು ದೊಡ್ಡದಾಗಿತ್ತು. ಹರಸಾಹಸಪಟ್ಟು ಗುಂಪಿನೊಳಗೆ ನುಸುಳಿದೆ. ಅಲ್ಲಿ ನಡೆಯುತ್ತಿದ್ದುದು ವಧು ನೋಡುವ ಶಾಸ್ತ್ರ!

ಜಾತ್ರೆಯ ಬಯಲಿನಲ್ಲಿ ವಧು ನೋಡುವ ಶಾಸ್ತ್ರವೇ? ಹೌದು, ಅಲ್ಲಿ ನಡೆಯುತ್ತಿದ್ದುದು ವಧು ನೋಡುವ ಶಾಸ್ತ್ರವೇ. ವರ ಶಾರೂಖ್ ಖಾನ್, ವಧು ಕಾಜೋಲ್...!

ಅಂದಹಾಗೆ, ಅಲ್ಲಿದ್ದುದು ಶಾರೂಖ್ ಖಾನ್ ಮತ್ತು ಕಾಜೋಲ್ ಹೆಸರಿನ ತಾರೆಯರಲ್ಲ; ತಾರೆಯರ ಹೆಸರಿನ ಮಂಗಗಳು! ಆ ಕೋತಿಗಳನ್ನು ಆಡಿಸುವ ವ್ಯಕ್ತಿಯೇ ವಧು ಹಾಗೂ ವರನ ಕಡೆಯ ಏಕೈಕ ಬಂಧು. ಆತನೇ ಈ ಶಾಸ್ತ್ರದ ಸೂತ್ರಧಾರಿ ಕೂಡ. ನೋಡಲು ಬಂದಿದ್ದ ಜನರು ವಧು ನೋಡುವ ಶಾಸ್ತ್ರಕ್ಕೆ ಸಾಕ್ಷಿಯಾಗಿದ್ದರು. ಆಕಾಶವೇ ಚಪ್ಪರ, ಬಯಲೇ ಆಲಯ. ಇಂಥದ್ದೊಂದು ಅಪರೂಪದ ವಧು ನೋಡುವ ಶಾಸ್ತ್ರ ನಡೆದದ್ದು ರಾಜಸ್ಥಾನದ ಪುಷ್ಕರದ ಜಾತ್ರೆಯಲ್ಲಿ.

ಶಾರೂಖ್ ಬೋರಲು ಹಾಕಲಾಗಿದ್ದ ಚೆಂಬೊಂದರ ಮೇಲೆ ಕುಳಿತಿದ್ದ. ಕಾಜೋಲ್ ತಲೆ ತಗ್ಗಿಸಿಕೊಂಡು ನಿಂತಿದ್ದಳು. ಅವರಿಬ್ಬರ ಕುತ್ತಿಗೆಗೆ ಹಗ್ಗ ಹಾಕಿ ನಿಯಂತ್ರಿಸಲಾಗುತ್ತಿತ್ತು. 'ದೇಖೋ ಕಾಜೋಲ್ ಏ ಹೀ ಹೈ ವರ್. ಇಸ್ಕಾ ನಾಮ್ ಹೈ ಶಾರೂಖ್ ಖಾನ್. ಇಸ್ಕಾ ಚಷ್ಮಾ ದೇಖೋ, ಇಸ್ಕಾ ಬಾಲ್ ದೇಖೋ. ಏ ಬಹೂತ್ ಹ್ಯಾಂಡ್ಸಮ್ ಲಡ್ಕಾ ಹೈ. ಅಚ್ಛಾ ಕಮಾತಾ ಭೀ ಹೈ. ಇಸ್ಕೆ ಪಾಸ್ ಗಾಡಿ ಹೈ, ಬಂಗ್ಲಾ ಹೈ. ಅಗರ್ ತುಮ್ಕೋ ಏ ಲಡಕಾ ಪಸಂದ್ ಆಯೇತೋ ಹ್ಞಾ ಬೋಲಿಯೇ. ಅಗರ್ ಪಸಂದ್ ನಹೀ ಆಯಾ ತೋ ನಾ ಬೋಲಿಯೇ' ಎಂದು ಕೋತಿ ಆಡಿಸುವ ವ್ಯಕ್ತಿ, ಶಾರೂಖ್ ಕುರಿತು ಕಾಜೋಲ್ ಎದುರು ವರ್ಣಿಸುತ್ತಿದ್ದ.

ಆತನ ಮಾತು ಕೇಳಿ 'ಹುಡುಗ ಮನಸ್ಸಿಗೆ ಬಂದಿಲ್ಲ' ಎನ್ನುವಂತೆ ಸನ್ನೆ